| | |
|---|---|
| 9 ನೇ ತರಗತಿ ಸಂಕಲನಾತ್ಮಕ ಮೌಲ್ಯಮಾಪನ 2 ಮಾದರಿ ಪ್ರಶ್ನೆ ಪತ್ರಿಕೆ | |
| ವಿಷಯ: ಸಮಾಜ ವಿಜ್ಞಾನ | ಅಂಕಗಳು :90 |

**I. ಈ ಕೆಳಗಿನ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರ ಬರೆಯಲು ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರಗಳೊಂದಿಗೆ ಪೂರ್ಣ ಉತ್ತರಗಳನ್ನು ಬರೆಯಿರಿ.** **12x1=12**

1. ''ಅದ್ವೈತ ಸಿದ್ಧಾಂತ'ದ ಪ್ರತಿಪಾದಕರು
   (a)ಬಸವೇಶ್ವರ (b)ಮಧ್ವಾಚಾರ್ಯ (c)ಸರ್ವಜ್ಞ (d)ಶಂಕರಾಚಾರ್ಯ
2. ಭಾರತಕ್ಕೆ ಜಲಮಾರ್ಗವನ್ನು ಕಂಡುಹಿಡಿದವರು.
   (a)ಮೆಗಲಾನ್(b)ವಾಸ್ಕೋ-ಡ-ಗಾಮ(c)ಕೋಲಂಬಸ್ (d)ಕಬ್ರಾಲ್
3. ಲೋಕಸಭೆಯ ಈಗಿನ ಒಟ್ಟು ಸದಸ್ಯರ ಸಂಖ್ಯೆ (a)545 (b)225 (c)75 (d)250
4. ನಮ್ಮ ಮೂರೂ ಸೇನಾ ಪಡೆಗಳ ಪ್ರಧಾನ ಮಹಾದಂಡನಾಯಕರು
   (a)ರಕ್ಷಣಾ ಸಚಿವರು (b)ಪ್ರಧಾನಮಂತ್ರಿಗಳು (c)ರಾಷ್ಟ್ರಪತಿಗಳು (d)ಜನರಲ್
5. ಈಶಾನ್ಯ ವಲಯದ ಆದಿವಾಸಿಗಳು ಈ ಜನಾಂಗಕ್ಕೆ ಸೇರಿದವರು
   (a)ದ್ರಾವಿಡ (b)ಮುಂಡಾ (c)ನೀಗ್ರಿಟೋ (d)ಮಂಗೋಲರು
6. ಮಾನವನು ಸಾಮಾಜಿಕ ವ್ಯಕ್ತಿಯಾಗಿ ರೂಪುಗೊಳ್ಳುವುದು
   (a)ಸಾಮಾಜೀಕರಣದಿಂದ (b)ಕೈಗಾರೀಕರಣದಿಂದ (c)ನಗರೀಕರಣದಿಂದ (d)ರಾಷ್ಟ್ರೀಕರಣದಿಂದ
7. ಅತಿ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿರುವ ಜಿಲ್ಲೆ
   (a)ದಕ್ಷಿಣ ಕನ್ನಡ (b)ಉತ್ತರ ಕನ್ನಡ (c)ಕೊಡಗು (d)ಮೈಸೂರು
8. ಕೊಡಗು ಜಿಲ್ಲೆಯನ್ನು ಕರ್ನಾಟಕದ ಕಾಶ್ಮೀರ ಎಂದು ಕರೆಯುತ್ತಾರೆ.ಕಾರಣ
   (a)ಜಲಪಾತಗಳಿರುವುದರಿಂದ (b)ಹೆಚ್ಚು ಬೆಟ್ಟಗಳಿರುವುದರಿಂದ
   (c)ಕಿತ್ತಳೆ ಹಣ್ಣನ್ನು ಹೆಚ್ಚಾಗಿ ಬೆಳೆಯುವುದರಿಂದ (d)ತಂಪಾದ ವಾತಾವರಣವಿರುವುದರಿಂದ
9. ಕಾರ್ಮಿಕನ ಸೀಮಾಂತ ಉತ್ಪಾದನೆ ಶೂನ್ಯವಾಗಿದ್ದಾರೆ ಅದು,
   (a)ಐಚ್ಛಿಕ ನಿರುದ್ಯೋಗ (b)ಮರೆಮಾಚಿತ ನಿರುದ್ಯೋಗ (c)ಯುವ ನಿರುದ್ಯೋಗ (d)ತಾಂತ್ರಿಕ ನಿರುದ್ಯೋಗ
10. ಇವು ತೃತೀಯ ವಲಯಕ್ಕೆ ಉದಾಹರಣೆ
    (a)ಕೃಷಿ,ಗಣಿಗಾರಿಕೆ (b)ಆರೋಗ್ಯ,ಶಿಕ್ಷಣ (c)ಕೈಗಾರಿಕೆ,ಗೃಹನಿರ್ಮಾಣ (d)ಪಶುಪಾಲನೆ,ಮೀನುಗಾರಿಕೆ
11. ಭಾರತದಲ್ಲಿ ಮೊಟ್ಟ ಮೊದಲ ಷೇರುಮಾರುಕಟ್ಟೆ ಆರಂಭವಾದ ಸ್ಥಳ
    (a)ಮುಂಬೈ (b)ಕೊಲ್ಕತ್ತಾ (c)ಮೈಸೂರು (d)ಬೆಂಗಳೂರು
12. ಗ್ರಾಹಕರು ವಸ್ತುಗಳನ್ನು ಕೊಳ್ಳಲು ಪ್ರೇರೇಪಿಸುವ ಚಟುವಟಿಕೆ ಈ ಮಿಶ್ರಣದ ಅಂಶವಾಗಿದೆ
    (a)ಬೆಲೆ ಮಿಶ್ರಣ (b)ಸ್ಥಳ ಮಿಶ್ರಣ (c)ಪ್ರವರ್ತನೆ ಮಿಶ್ರಣ(d)ಉತ್ಪನ್ನ ಮಿಶ್ರಣ

**II. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ** **18x1=18**

13. ಡಿಮ್ಯಾಟ್ ಲೆಕ್ಕ ಎಂದರೇನು?

14.ಗ್ರಾಹಕರ ರಕ್ಷಣೆಯು ಏಕೆ ಅವಶ್ಯಕವಾಗಿದೆ ?

15.ಬಾಲಕಾರ್ಮಿಕ ಎಂದರೇನು?

16,ಸ್ಟೇಟ್ ಬ್ಯಾಂಕ್ ಆಫ್ ಮೈಸೂರನ್ನು ಸ್ಥಾಪಿಸಿದವರು ಯಾರು?

17.'ಬುಟಕಟ್ಟು' ಎಂಬ ಪದವನ್ನು ಹೇಗೆ ವ್ಯಾಖ್ಯಾನಿಸುವಿರಿ ?

18.ಕೇಂದ್ರ ಕುಟುಂಬ ಎಂದರೇನು?

19.ಶಿವಾಜಿಗೆ ಆಡಳಿತದಲ್ಲಿ ಸಹಾಯಕರಾಗಿದ್ದ ಮಂತ್ರಿಮಂಡಲಕ್ಕೆ ಏನೆಂದು ಕರೆಯುತ್ತಿದ್ದರು?

20.'ತರುಣ ಇಟಲಿ' ಎಂಬ ಪಕ್ಷವನ್ನು ಇಟಲಿಯಲ್ಲಿ ಕಟ್ಟಿದವರು ಯಾರು ?

21.ದೆಹಲಿ ಸುಲ್ತಾನರ ಆಡಳಿತದಲ್ಲಿ ರಜಿಯಾ ಸುಲ್ತಾನಾ ಪ್ರಸಿದ್ಧಳಾಗಿದ್ದಾಳೆ.ಏಕೆ ?

22.ಪ್ರವಾದಿ ಮೊಹಮ್ಮದ್ ಪೈಗಂಬರರ ತಂದೆ ತಾಯಿ ಯಾರು?

23.ರಾಷ್ಟ್ರೀಯ ಭಾವೈಕ್ಯತೆ ಎಂದರೇನು?

24.ಜನತಾ ನ್ಯಾಯಾಲಯ (ಲೋಕ್ ಅದಾಲತ್)ವನ್ನು ಸ್ಥಾಪಿಸಿದ ಉದ್ದೇಶವೇನು?

25.ನಮ್ಮ ಸಂವಿಧಾನ ಜಾರಿಗೆ ಬಂದದ್ದು ಯಾವಾಗ?

26.2011ರ ಜನಗಣತಿಯ ಪ್ರಕಾರ ಕರ್ನಾಟಕದ ಜನಸಾಂದ್ರತೆ ಎಷ್ಟು?

27.ಕಾವೇರಿ ನದಿಯು ಎಲ್ಲಿ ಉಗಮ ಹೊಂದುತ್ತದೆ ?

28.ನೆಡುತೋಟದ ಬೆಳೆಗಳಿಗೆ ಉದಾಹರಣೆ ಕೊಡಿ.

29.ಕರ್ನಾಟಕದ 'ಹೆಬ್ಬಾಗಿಲು'ಎಂದು ಕರೆಯಲ್ಪಡುವ ಬಂದರು ಯಾವುದು?

30.ಕರ್ನಾಟಕದ ಉತ್ತರದ ಮೈದಾನವನ್ನು 'ಬಿಸಿಲನಾಡು'ಎಂದು ಕರೆಯುವರು.ಏಕೆ?

**V.ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 17x2=34**

31.ವ್ಯವಹಾರದಲ್ಲಿ ಲೆಕ್ಕಬರಹವು ಹೆಚ್ಚು ಉಪಯುಕ್ತವಾದುದ್ದಾಗಿದೆ.ಸಮರ್ಥಿಸಿ.

32.ಪುರಾತನ ಅರ್ಥ ವ್ಯವಸ್ಥೆಯ ಲಕ್ಷಣಗಳನ್ನು ತಿಳಿಸಿ.

33.ವಿಜಯ ನಗರದ ಅರಸರು ಧಾರ್ಮಿಕ ಸಹಿಷ್ಣುಗಳಾಗಿದ್ದರು.ಸಮರ್ಥಿಸಿ.

34.ಮೊದಲ ಪಾಣಿಪತ್ ಕದನ ಯಾರ ನಡುವೆ ನಡೆಯಿತು?ಇದರ ಪರಿಣಾಮವೇನು?

35.ಊಳಿಗಮಾನ್ಯ ಪದ್ಧತಿಯ ಪತನಕ್ಕೆ ಕಾರಣಗಳನ್ನು ತಿಳಿಸಿ.

36.ಕಬೀರರ ಬೋಧನೆಗಳನ್ನು ಬರೆಯಿರಿ.

37.ಷಾಜಹಾನನು ಕಲೆ ಮತ್ತು ವಾಸ್ತುಶಿಲ್ಪಕ್ಕೆ ನೀಡಿದ ಕೊಡುಗೆಗಳನ್ನು ತಿಳಿಸಿ.

38.ಸಾಮಾಜೀಕರಣದ ನಿಯೋಗಿಗಳನ್ನು ಪಟ್ಟಿಮಾಡಿ.

39.ರಾಜ್ಯ ವಿಧಾನಪರಿಷತ್ ಸದಸ್ಯರು ಯಾವ ಯಾವ ಕ್ಷೇತ್ರ ಗಳನ್ನು ಪ್ರತಿನಿಧಿಸುತ್ತಾರೆ?

40.ನಮ್ಮ ರಕ್ಷಣಾ ಪಡೆಗಳು ಅಂತರರಾಷ್ಟ್ರೀಯ ಶಾಂತಿ ಸ್ಥಾಪನಾ ಕಾರ್ಯಗಳಲ್ಲಿ ಪ್ರಮುಖ ಪಾತ್ರ ವಹಿಸಿವೆ. ಸಮರ್ಥಿಸಿ.

41.ಲೋಕಸಭಾ ಸದಸ್ಯರಿಗೆ ಇರಬೇಕಾದ ಅರ್ಹತೆಗಳೇನು?

42.ಕರ್ನಾಟಕದ ನೆರೆಯ ರಾಜ್ಯಗಳನ್ನು ಪಟ್ಟಿಮಾಡಿ.

43.ರಸ್ತೆ ಸಾರಿಗೆಯು ಪ್ರಾಮುಖ್ಯತೆಯನ್ನು ಪಡೆದಿದೆ.ಹೇಗೆ?

44.ಕರ್ನಾಟಕವು 'ಶ್ರೀಗಂಧದ ನಾಡು'ಎಂದು ಪ್ರಸಿದ್ಧಿ ಪಡೆದಿದೆ.ಏಕೆ?

45.ಮ್ಯಾಂಗನೀಸನ್ನು 'ಬಹು ಉಪಯೋಗಿ ಖನಿಜ'ಎಂದು ಕರೆಯುವರು.ಸಮರ್ಥಿಸಿ.

46.ಕರ್ನಾಟಕದ ಪ್ರಮುಖ ಐತಿಹಾಸಿಕ ತಾಣಗಳನ್ನು ಪಟ್ಟಿಮಾಡಿ.

47.ವ್ಯವಸಾಯದ ವಿಧಗಳನ್ನು ತಿಳಿಸಿ.

**VI.ಕೆಳಗಿನ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿ. 6x3=18**

48.ಜೀಸಸ್ ಕ್ರಿಸ್ತರ ಬೋಧನೆಗಳನ್ನು ವಿವರಿಸಿ

49.ಭಾರತೀಯ ರಿಸರ್ವ್ ಬ್ಯಾಂಕ್ ಭಾರತದ ಅರ್ಥ ವ್ಯವಸ್ಥೆಯ ಅಭಿವೃದ್ಧಿಯಲ್ಲಿ ಮಹತ್ವದ ಕಾರ್ಯಗಳನ್ನು ನಿರ್ವಹಿಸುತ್ತಿದೆ.ಸಮರ್ಥಿಸಿ.

50.ಅವಿಭಕ್ತ ಕುಟುಂಬದ ಲಕ್ಷಣಗಳನ್ನು ತಿಳಿಸಿ.

51.ಕರ್ನಾಟಕ ಅನೇಕ ವೈವಿಧ್ಯಮಯ ಕೈಗಾರಿಕೆಗಳಿಗೆ ಹೆಸರುವಾಸಿಯಾಗಿದೆ.ಇದಕ್ಕೆ ಕಾರಣಗಳೇನು?

52.ನಿರ್ವಹಣೆಯ ತತ್ವಗಳನ್ನು ತಿಳಿಸಿ.

**ಅಥವಾ** ವ್ಯವಹಾರ ಸಂಸ್ಥೆಗಳಿಗೆ ಹಣಕಾಸನ್ನು ಪೂರೈಸುವ ಸಂಸ್ಥೆಗಳು ಯಾವುವು?

53.ಭಾರತದ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ತಿಳಿಸಿ.

**ಅಥವಾ** ರಾಷ್ಟ್ರಪತಿಗಳ ಅಧಿಕಾರಗಳನ್ನು ಪಟ್ಟಿಮಾಡಿ.

**VII.ಕೆಳಗಿನ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 1x4=4**

54.ಮತಸುಧಾರಣಾ ಚಳುವಳಿಯು ಹಲವು ಪರಿಣಾಮಗಳಿಗೆ ಕಾರಣವಾಯಿತು.ಹೇಗೆ?

**ಅಥವಾ** ಫ್ರಾನ್ಸಿನ ಮಹಾಕ್ರಾಂತಿಗೆ ಸಾಮಾಜಿಕ ಮತ್ತು ಆರ್ಥಿಕ ಅಂಶಗಳು ಪ್ರಮುಖ ಕಾರಣವಾದವು.ಸಮರ್ಥಿಸಿ.

**VIII.**

**55.ಕರ್ನಾಟಕದ ನಕ್ಷೆಯನ್ನು ಬರೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿ. 1+3=4**

a)ಕರಾವಳಿ ಮೈದಾನ (b)ಶಿವನಸಮುದ್ರ (c)ಹಟ್ಟಿ ಚಿನ್ನದ ಗಣಿ